27	ಇಕ್ರಾಮ ಉರ್ದು ಪ್ರಾ ಶಾಲೆ, ಹುಬ್ಬಳ್ಳಿ	1986–87
28	ಕೆ ಎಲ್ ಇ ಪ್ರಾ ಶಾಲೆ, ಹುಬ್ಬಳ್ಳಿ	1984–85
29	ವಿಜಯಾ ಕ ಪ್ರಾ ಶಾಲೆ, ಹುಬ್ಬಳ್ಳಿ	1983–84
30	ಜೆ ಎಸ್ ಎಸ್ ಕ ಪ್ರಾ ಶಾಲೆ, ವಿದ್ಯಾಗಿರಿ, ಧಾರವಾಡ	1984–85
31	ಸಿದ್ದೇಶ್ವರ ಕ ಪ್ರಾ ಶಾಲೆ, ಉಣಕಲ್	1984–85
32	ಶ್ರೀಮತಿ ನಾಗರತ್ನಮ್ಮ ಜ್ಯೋತಿ ಪ್ರಾ ಶಾಲೆ, ಶ್ರೀನಗರ, ಧಾರವಾಡ	1988–89
33	ಶ್ರೀ ಜಗದ್ಗುರು ಗಂಗಾಧರ ಕನ್ನಡ ಪ್ರಾ ಶಾಲೆ, ಹುಬ್ಬಳ್ಳಿ	1985–86
34	ನಳಂದಾ ಕನ್ನಡ ಪ್ರಾ ಶಾಲೆ, ಶಿಗ್ಗಾಂವ	1985–86
35	ಕರ್ನಾಟಕ ಪ್ರೊಗ್ರೇಸಿವ್ ಕ ಪ್ರಾ ಶಾಲೆ ಡಿ.ಸಿ. ಕಾಂಪೌಂಡ್, ಧಾರವಾಡ	1985–86
36	ವಿದ್ಯಾಭಾರತಿ ಎಜ್ಯುಕೇಷನ್ ಸೊಸೈಟಿ, ಸವಣೂರ	1985–86
37	ರೋಟರಿ ಕ ಪ್ರಾ ಶಾಲೆ, ನವಲಗುಂದ	1984–85
38	ನ್ಯೂ ಎಜ್ಯುಕೇಶನ್ ಸೊಸೈಟಿ ಕ ಪ್ರಾ ಶಾಲೆ, ಹುಬ್ಬಳ್ಳಿ	1984–85
39	ಮಹಾಂತೇಶ ಕ ಪ್ರಾ ಶಾಲೆ, ಧಾರವಾಡ	1985–86
40	ಬಸವೇಶ್ವರ ಕ ಪ್ರಾ ಶಾಲೆ, ರಾಣಿಬೆನ್ನೂರ	1985–86
41	ಬಸವೇಶ್ವರ ಕ ಪ್ರಾ ಶಾಲೆ, ಚಳಗೇರಿ	1985–86
42	ಮಹಾತ್ಮಾ ಗಾಂಧಿ ಕ ಪ್ರಾ ಶಾಲೆ, ರಾಣಿಬೆನ್ನೂರ್	1985–86
43	ಕನಕದಾಸ ಕ ಪ್ರಾ ಶಾಲೆ, ರಾಣಿಬೆನ್ನೂರ	1985–86
44	ಜೆಎಸ್ ಕ ಪ್ರಾ ಶಾಲೆ, ಶಿಗ್ಲಿ	1985–86
45	ಗ್ರಾಮಾಂತರ ಶಿಕ್ಷಣ ಸಮಿತಿ, ಶಿಗ್ಲಿ	1985–86
46	ಶ್ರೀ ಗುರು ಮಡಿವಾಳೇಶ್ವರ ಪ್ರಾ ಶಾಲೆ, ಕಲಘಟಗಿ	1985–86
47	ಹೆಚ್.ಪಿ.ಇ. ಪದವಿ ಪೂರ್ವ ಕಾಲೇಜು, ಗದಗ್	1973
48	ಸಿ.ಇ.ಎಸ್.ಪದವಿ ಪೂರ್ವ ಕಾಲೇಜು, ಹಿರೆಕೇರೂರು	1973
49	ಅಂಜುಮಾನ್ ಪದವಿ ಪೂರ್ವ ಕಾಲೇಜು, ಧಾರವಾಡ	1973
50	ಹೆಚ್.ಎಸ್. ಪದವಿ ಪೂರ್ವ ಕಾಲೇಜು, ರಾಣಿಬೆನ್ನೂರು	1973
51	ಎಸ್.ಎಸ್.ಕೆ. ಪದವಿಪೂರ್ವ ಕಾಲೇಜು, ಹುಬ್ಬಳ್ಳಿ	1989

ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಲ್ಲೂರು ಶಾಲೆಗೆ ಶಿಕ್ಷಕರ ನೇಮಕಾತಿ

307 (882) ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ, ಚಿತ್ತಾಪುರ ತಾಲ್ಲೂಕಿನ ಅಲ್ಲೂರು ಗ್ರಾಮದಲ್ಲಿ 7ನೇ ತರಗತಿಯವರೆಗೂ ಶಾಲೆಗಳಿದ್ದು ಒಬ್ಬರೇ ಶಿಕ್ಷಕಿ ಇರುವುದರಿಂದ ದಿ. 29.12.92ರಂದು ವಿಧಾನಸಭೆಯಲ್ಲಿ ಹೆಚ್ಚಿನ

ಶಿಕ್ಷಕರರನ್ನು ನೇಮಿಸಲಾಗಿದೆಯೆಂದು ಹೇಳಿ ನೇಮಿಸದೆ ಇರುವುದು ಎಂಬ ತಪ್ಪು ಮಾಹಿತಿಯನ್ನು ನೀಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಉಪ ನಿರ್ದೇಶಕರು, ಸಾ.ಶಿ.ಇ. ಗುಲ್ಬರ್ಗ, ಇವರ ಸಮಕ್ಷಮದಲ್ಲಿ ದಿ. 2.1.92ರಂದು ಆಲ್ಲೂರು (ಬಿ) ಶಾಲೆಯ ಶಿಕ್ಷಕರ ಕಡತವನ್ನು ನೋಡಿದರೆ ಒಬ್ಬರೇ ಶಿಕ್ಷಕರು ಇರುವರೆಂದು ಕಂಡು ಬಂದಿದ್ದು ನಿಜವಲ್ಲವೇ;

ಇ) ಇಂತ ತಪ್ಪು ಉತ್ತರ ನೀಡಿ ಸರ್ಕಾರಕ್ಕೆ ಮರೆಮಾಚಿ ವಿದ್ಯಾರ್ಥಿಗಳ ಜೀವನವನ್ನು ಹಾಳು ಮಾಡಿರುವ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಹೆಚ್ಚಿನ ಶಿಕ್ಷಕರನ್ನು ಶಾಲೆಗೆ ನೇಮಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) ಒಂದನೇ ತರಗತಿಯಿಂದ 7ನೇ ತರಗತಿಯವರೆಗೆ ಶಾಲೆಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – 169. ಶಾಲೆಗೆ ಒಂದು ಹುದ್ದೆ (ಶಿಕ್ಷಕರ) ಮಂಜೂರಾಗಿದ್ದು ಮತ್ತೊಬ್ಬ ಶಿಕ್ಷಕರು ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದು – ಹೀಗೆ ಹಾಲಿ ಇಬ್ಬರು ಶಿಕ್ಷಕರಿದ್ದಾರೆ.

ಆ) ಸದರಿ ಶಾಲೆಗೇ ಮಂಜೂರಾದ ಶಿಕ್ಷಕರ ಸಂಖ್ಯೆ ಒಂದು ಇರುವುದು ಶಿಕ್ಷಕರ ಕಡತದಲ್ಲಿ ಕಂಡು ಬಂದುದು ನಿಜ.

ಇ) ಉದ್ಭವಿಸುವುದಿಲ್ಲ.

ಈ) ತಾತ್ಕಾಲಿಕವಾಗಿ ಒಬ್ಬ ಶಿಕ್ಷಕರನ್ನು ನಿಯೋಜನೆ ಮಾಡಲಾಗಿದೆ, ಹಾಗೂ ಶಿಕ್ಷಕರ ಹುದ್ದೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಪ್ರಥಮ ದರ್ಜೆ ಮಹಾವಿದ್ಯಾಲಯಕ್ಕೆ ಹೆಚ್ಚಿನ ಉಪನ್ಯಾಸಕರ ನೇಮಕ

308 (881) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಸಾಕಷ್ಟು (ಕೇವಲ ಇಬ್ಬರೇ ಉಪನ್ಯಾಸಕರು ಇರುವರು) ಉಪನ್ಯಾಸಕರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ವಿದ್ಯಾಲಯಕ್ಕೆ ಸಾಕಷ್ಟು ಉಪನ್ಯಾಸಕರನ್ನು ನೇಮಿಸದಿರುವುದರಿಂದ ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಉಪನ್ಯಾಸಕರಿಗೆ ಕೇವಲ 400 ರೂ.ಗಳನ್ನು ಸರ್ಕಾರವು ನೀಡಿರುವುದರಿಂದ ಉಪನ್ಯಾಸಕರು ಬಾರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಉಪನ್ಯಾಸಕರಿಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕಾಲದಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;